ಶ್ರೀ ಬಿ.ಎಂ. ಇದಿನಬ್ಬ : ಅನಾವಶ್ಯಕವಾಗಿ ಈ ಸಮಸ್ಯೆ ತಂದುಹಾಕಿದ್ದಾರೆ.

ಅಧ್ಯಕ್ಷರು : ಶ್ರೀ ಜಾಲಪ್ಪ.

ಶ್ರೀ ಆರ್.ಎಲ್. ಜಾಲಪ್ಪ : ಸಹಕಾರ ಮಂತ್ರಿಗಳಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ : ಅಧ್ಯಕ್ಷರೆ, ಎರಡನೇ ಕಾಲಿಂಗ್ ಅಟೆನ್‌ಷನ್ ತೆಗೆದುಕೊಳ್ಳಬಹುದು.

ಗಮನ ಸೆಳೆಯುವ ಸೂಚನೆಗಳು

1) ಕಿಂಕೋ ಕಾರ್ಖಾನೆಯ ಕಾರ್ಮಿಕರಿಗೆ ಕಳೆದ ಎರಡು ತಿಂಗಳಿಂದ ವೇತನ ಇಲ್ಲದೆ ತೊಂದರೆಯಲ್ಲಿರುವುದು.

ಕೆ.ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೇ, ಕಿಂಕೋ ಕಾರ್ಖಾನೆಯ ಕಾರ್ಮಿಕರಿಗೆ ಕಳೆದ ಎರಡು ತಿಂಗಳಿಂದ ವೇತನ ಇಲ್ಲದೆ ತೊಂದರೆಯಲ್ಲಿರುವ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು) : 1975ರಲ್ಲಿ 'ಕಿಂಕೋ' ಕಂಪೆನಿಯು ಸ್ಥಾಪಿತವಾಗಿದ್ದು, ಮೊದಲು ಇಲಾಖೆ ಮತಿಯಿಂದ ನಡೆಸಲಾಗುತ್ತಿರುವ ಬೆಂಗಳೂರಿನ ಸರಕಾರಿ ಇಂಡಸ್ಟ್ರಿಯಲ್ ವರ್ಕ್‌ಷಾಪ್ ಹಾಗೂ ಹಾಸನ ಮೈಸೂರು ಇಂಪ್ಲಿಮೆಂಟ್ಸ್ ಫ್ಯಾಕ್ಟರಿಗಳ ಸಂಯೋಜನೆಯಾಗಿದೆ. 1986ರ ಆಗಸ್ಟ್‌ನಿಂದೀಚೆಗೆ, ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯು ಬಸ್‌ಗಳಿಗೆ ಬಾಡಿ ಕಟ್ಟುವ ಕೆಲಸ ಕಾರ್ಯಗಳಲ್ಲಿ ಸದರಿ ಕಂಪೆನಿಯು ನಿರತವಾಗಿದೆ. ಆದರೆ ಕಂಪೆನಿಯು ತೀವ್ರ ನಷ್ಟದಲ್ಲಿದ್ದು ಹಲವಾರು ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಕಚ್ಚಾ ಪದಾರ್ಥಗಳ ಮುಗ್ಗಟ್ಟಿನಿಂದಾಗಿ ಕೆಲಸದ ದರಗಳನ್ನು ಪರಿಷ್ಕರಣೆ ಮಾಡುವಂತೆ ಕರ್ನಾಟಕ ರಾಜ್ಯ ರಸ್ತೆಸಾರಿಗೆ ಸಂಸ್ಥೆಯನ್ನು ಕೇಳಿದ್ದರು. ಆದರೆ ದಿನಾಂಕ 1.4.89ರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ನೀಡಿರುವ ಪರಿಷ್ಕೃತ ದರಗಳು ತೃಪ್ತಿಕರವಾಗಿಲ್ಲ. ಅಲ್ಲದೇ ಕೊಡುವ ಎಲ್ಲಾ ಕೆಲಸಗಳನ್ನು ಪೂರೈಸಲು ಅಗತ್ಯವಾದ ನಿರ್ವಹಣಾ ಬಂಡವಾಳ ಕೂಡ ಸದರಿ ಸಂಸ್ಥೆಗೆ ಇರುವುದಿಲ್ಲವಾದ್ದರಿಂದ ಕಂಪನಿಯು ಹೊಂದಾಣಿಕೆ ಮಾಡುವುದು ಕಷ್ಟ ಸಾಧ್ಯವಾಗಿದೆ. 27.6.88ರಲ್ಲಿ ಸರ್ಕಾರ (ಕೈಗಾರಿಗಾ ಇಲಾಖೆ) ಹೊರಡಿಸಿರುವ ಆದೇಶದ ಪ್ರಕಾರ ಕಿಂಕೋ ಕಂಪನಿಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಂಗ ಸಂಸ್ಥೆಯೆಂದು ಪರಿವರ್ತಿಸಲಾಗಿದ್ದು, 116.49 ಲಕ್ಷ ರೂಪಾಯಿಗಳನ್ನು ಸಹ ಭಾಗಿತ್ವ ನಿಧಿಯೆಂದು ಕೆಳಕಂಡ ಷರತ್ತುಗಳ ಮೇಲೆ ಕಿಂಕೋಗೆ ಬಿಡುಗಡೆ ಮಾಡುವ ಪ್ರಸ್ತಾಪವಿದೆ.

1) ಕಿಂಕೋ ಕಂಪೆನಿಯು, ತನ್ನ ಎಲ್ಲಾ ಉತ್ಪಾದನೆಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಎಲ್ಲಾ ಅಗತ್ಯಗಳನ್ನು ಪೂರೈಸಲು ಸನ್ನದ್ಧವಾಗಬೇಕು.
2) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು, ರಸ್ತೆ ಸಾರಿಗೆ ನಿಗಮದ ಅಧಿನಿಯಮದ ಪ್ರಕಾರ ಅಂಗ ಸಂಸ್ಥೆಯೊಂದನ್ನು ರಚಿಸಿ, ಕಿಂಕೋ ಕಂಪೆನಿಯು ಆಡಳಿತವನ್ನು ವಹಿಸಿಕೊಳ್ಳಲು ಪ್ರಮುಖ ಪಾತ್ರ ವಹಿಸಬೇಕು.
3) ಕಿಂಕೋ ಕಂಪೆನಿಯ ಆಡಳಿತದಲ್ಲಿ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಉಪಾಧ್ಯಕ್ಷರು ಹಾಗೂ ನಿರ್ವಾಹಕ ನಿರ್ದೇಶಕರು ಆಡಳಿತ ಮಂಡಳಿಯ ಅಧ್ಯಕ್ಷರಾಗಿಯೂ ಮುಖ್ಯ ಲೆಕ್ಕಪತ್ರ ಅಧಿಕಾರಿಗಳು ಹಾಗೂ ಮುಖ್ಯ ತಾಂತ್ರಿಕ ಇಂಜಿನಿಯರುಗಳು ನಿರ್ದೇಶಕರಾಗಿಯೂ ಅಲ್ಲದೆ ಮತ್ತಿತರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಸಂಸ್ಥೆಯ ನಿರ್ವಾಹಕ ನಿರ್ದೇಶಕರಾಗಿರುವಂತೆ

ಈಗ ಕಿಂಕೋ ಕಂಪೆನಿಯು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಗತ್ಯಗಳನ್ನು ಪೂರೈಸುವಲ್ಲಿ ಉತ್ಪಾದನೆಗೆ ಸನ್ನದ್ಧವಾಗಿದೆ. ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಉಪಾಧ್ಯಕ್ಷ ಹಾಗೂ ನಿರ್ವಾಹಕ ನಿರ್ದೇಶಕರು ಕಂಪೆನಿಯ ಅಧ್ಯಕ್ಷರಾಗಿಯೂ ಮತ್ತೊಬ್ಬ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಕಂಪೆನಿಯ ನಿರ್ವಾಹಕ ನಿರ್ದೇಶಕರಾಗಿಯೂ ನೇಮಕಗೊಂಡಿದ್ದಾರೆ. ಆದರೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು, ರಸ್ತೆ ಸಾರಿಗೆ ಅಧಿನಿಯಮದ ಅನ್ವಯ ಇದುವರೆಗೆ ಅಂಗ ಸಂಸ್ಥೆಯೊಂದನ್ನು ರಚಿಸಿಲ್ಲ ಮತ್ತು ಕಿಂಕೋ ಕಂಪನಿಯ ಆಡಳಿತವನ್ನು ಸಹ ವಹಿಸಿಕೊಂಡಿರುವುದಿಲ್ಲ.

ಕಿಂಕೋ ಕಂಪೆನಿಯು ಒಟ್ಟು 533 ನೌಕರರನ್ನು ಹೊಂದಿದ್ದು 318 ಜನರು ಬೆಂಗಳೂರಿನಲ್ಲಿಯೂ, 215 ಜನ ಹಾಸನದಲ್ಲೂ ಕಾರ್ಯನಿರ್ವಹಿಸುತ್ತಿದ್ದಾರೆ. ಪಿ.ಎಫ್ ಮತ್ತು ಇ.ಎಸ್.ಐ. ವಂತಿಗೆಯನ್ನು ಹೊರತುಪಡಿಸಿ ಸಂಬಳ ಸಾರಿಗೆಗಳನ್ನು ಕೊಡಲು ತಿಂಗಳಿಗೆ 12 ಲಕ್ಷ ರೂಪಾಯಿಗಳ ಅಗತ್ಯವಿದ್ದು ಹಣದ ಕೊರತೆಯಿಂದ ಫೆಬ್ರವರಿ 91ಕ್ಕೆ ಸಂಬಳವನ್ನೇ ಕೊಡಲಾಗದ ಪರಿಸ್ಥಿತಿ ಉಂಟಾಗಿದೆ. ಈ ಪರಿಸ್ಥಿತಿಯಿಂದ ಕಾರ್ಮಿಕರು ವಿವಾದ ಹೂಡಿದ್ದು, ಕಾರ್ಮಿಕ ಆಯುಕ್ತರ ಸಂಸ್ಥೆಯ ನಿರ್ವಾಹಕ ನಿರ್ದೇಶಕರು ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಉಪಾಧ್ಯಕ್ಷ ಹಾಗೂ ನಿರ್ವಾಹಕ ನಿರ್ದೇಶಕರೊಡನೆ ಚರ್ಚಿಸಿ ನಂತರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು, ಕಿಂಕೋಗೆ 8 ಬಸ್‌ಗಳಿಗೆ ಚೌಕಟ್ಟನ್ನು (ಚಾಸ್ಸಿಸ್) ಕಟ್ಟಲು ನೀಡಿದ್ದು ಕಾರ್ಮಿಕರ ವೇತನಕ್ಕೆ ಈಗ ವ್ಯವಸ್ಥೆ ಮಾಡಲಾಗಿದೆ.

ಕಿಂಕೋ ಆಡಳಿತವನ್ನು ಆರ್ಥಿಕವಾಗಿ ಬಲಪಡಿಸದಿದ್ದಲ್ಲಿ ಮುಂಬರುವ ತಿಂಗಳುಗಳಲ್ಲಿ ಕೂಡ, ಇದೇ ಸಮಸ್ಯೆ ತಲೆದೋರುವ ಸಾಧ್ಯತೆ ಇದೆ. ರೂ 161 ಲಕ್ಷಗಳ ಆರ್ಥಿಕ ಸಹಾಯಕ್ಕಾಗಿ ಕಂಪನಿಯು ಸರಕಾರವನ್ನು ಕೇಳಿದ್ದು, ಸದರಿ ಕೇಳಿಕೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಮಾನ್ಯ ಸದಸ್ಯರು ಫೆಬ್ರವರಿಯಿಂದ ಇಲ್ಲಿಯವರೆಗೆ ಪಗಾರ ಕೊಟ್ಟಿಲ್ಲ ಎನ್ನುವ ವಿಚಾರದಲ್ಲಿ ಪ್ರಸ್ತಾವ ತಂದಿದ್ದರು. ಫೆಬ್ರವರಿಯಿಂದ ಈಚೆಗೆ ಬರುವ 2 ತಿಂಗಳ ಪಗಾರವನ್ನು ಕೊಡುವ ವ್ಯವಸ್ಥೆ ಈಗಾಗಲೇ ಆಗಿದೆ. ಹೋದ ವಾರದಲ್ಲಿ ಪಗಾರವನ್ನು ಕೊಡಲಾಗಿದೆ ಎಂದು ಈ ಸದನಕ್ಕೆ ತಿಳಿಸುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಈ ಗಮನ ಸೆಳೆವ ಸೂಚನೆ ಕೊಟ್ಟ ಉದ್ದೇಶ ಏನೆಂದರೆ ಹಾಸನದಲ್ಲಿ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ಎಂದು 1947ರಲ್ಲಿ ನಮಗೆ ಸ್ವಾತಂತ್ರ್ಯ ಬರುವುದಕ್ಕಿಂತಲೂ ಮುಂಚಿನಿಂದ ಇತ್ತು. ಅದು ಅತ್ಯುನ್ನತವಾಗಿ ನಡೆಯುತ್ತಿದ್ದಂತಹ ಕಂಪೆನಿ. ಇಲ್ಲಿ ನೂರಾರು ಬಗೆಯ ವ್ಯವಸಾಯ ಉಪಕರಣಗಳನ್ನು ನಡೆಯುತ್ತಿದ್ದರು. ಇಲ್ಲಿನ ಉಪಕರಣಗಳ ಮಾರಾಟ ಇಡೀ ದೇಶದಲ್ಲಿ ಚೆನ್ನಾಗಿ ಆಗುತ್ತಿತ್ತು. ಈ ಕಂಪನಿಯ ಬೆಂಗಳೂರು ಘಟಕದಲ್ಲಿ ಹೆಚ್ಚು ಲಾಸ್ ಆದ್ದರಿಂದ ನಷ್ಟ ತೋರಿಸಿ ಕಿಂಕೋ ಕಂಪನಿ ಎಂದು ಮಾಡಿದ್ದಾರೆ. ಬೆಂಗಳೂರಿನಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಆಫೀಸ್ ಎಲ್ಲಾ ವ್ಯವಸ್ಥೆಯನ್ನು ಇಲ್ಲಿ ಇಟ್ಟುಕೊಂಡು ಲಕ್ಷಗಟ್ಟಲೆ ಖರ್ಚು ಮಾಡಿ ಇದು ಲಾಸ್‌ನಲ್ಲಿ ನಡೆಯುತ್ತಿದೆ ಎಂದು ತೋರಿಸಿದರು. ಹಾಗೂ ಈ ಕಂಪೆನಿಯನ್ನು ಮುಚ್ಚುವ ಸ್ಥಿತಿ ಬಂತು ಮತ್ತೆ 1986ರಲ್ಲಿ ಇದಕ್ಕೆ ಕಾಯಕಲ್ಪ. ಮೊದಲು ಸಾರಿಗೆ ಸಂಸ್ಥೆಯ ಅಂಗಸಂಸ್ಥೆ ಮಾಡಲು ತೀರ್ಮಾನ ಮಾಡಿದರು. ಈ ಫ್ಯಾಕ್ಟರಿಯಲ್ಲಿ ಶ್ರೇಷ್ಠ ದರ್ಜೆಯ ಮೆಷಿನರಿಗಳು ಇದ್ದವು. ಅಲ್ಲದ್ದಂತಹ ಉಪಕರಣಗಳು ಇಡೀ ದಕ್ಷಿಣ ಭಾರತದಲ್ಲೇ ಎಲ್ಲೂ ಸಿಗುತ್ತಿರಲಿಲ್ಲವಂತೆ. ಅಂತಹ ಉಪಕರಣಗಳನ್ನು ಹೊರದೇಶದಿಂದ ತಂದು ಇಲ್ಲಿ ಅಳವಡಿಸಲಾಗಿತ್ತಂತೆ. ಅಂತಹ ಯಂತ್ರಗಳನ್ನು ಯದ್ವಾ ತದ್ವಾ ಮಾರಾಟ ಮಾಡಿದರು.

ವಾಟಾ ಕಂಪೆನಿಯವರು ಬಂದು ಅವಕ್ಕೆ ಕೊಟೇಷನ್ ಕೊಟ್ಟು ಪಡೆದುಕೊಂಡು ಹೋದರು ಎಂದರೆ ಅವುಗಳ ವ್ಯಾಲ್ಯೂ ಏನೆಂದು ಊಹಿಸಬಹುದು. ಇಷ್ಟು ಮಾಡಿದ್ದು ಹೋಗಲಿ, ಮುಂದೆ ಫ್ಯಾಕ್ಟರಿ ನಡೆಸುವುದಕ್ಕೂ ಸರಿಯಾದ ವ್ಯವಸ್ಥೆ ಇಲ್ಲ. ಇದನ್ನು ಸಾರಿಗೆ ಸಂಸ್ಥೆಯ ಅಂಗಸಂಸ್ಥೆ ಮಾಡುತ್ತೇವೆಂದು ಹೇಳಿದರು. 3-4 ಕಂಡೀಷನ್‌ಗಳನ್ನು ಹಾಕಿದರು. ಕಾನೂನು ಬದ್ಧವಾಗಿ ಏನು ಮಾಡಬೇಕೋ ಅದನ್ನು ಮಾಡಲಿಲ್ಲ. ಕಾರ್ಮಿಕರು ಏನಾದರೂ ಉಪವಾಸ ಕುಳಿತರೆ ನಾಲ್ಕೋ-ಐದೋ ಛಾಸಿಗಳನ್ನು ಕೊಡುತ್ತಾರೆ. ಅದನ್ನು ಕಟ್ಟುವುದಕ್ಕೆ ಹಣ ಕೊಡುತ್ತಾರೆ. ಅದರಲ್ಲಿ ಬಾಡಿ ಕಟ್ಟಿ, ಸಂಬಳಕ್ಕೆ ಉಪಯೋಗಿಸಿಕೊಂಡು, ಕೆಲಸ ಇಲ್ಲದೇ ಸುಮ್ಮನೆ ಕೂಡುತ್ತಾರೆ. ಇವರು ಸರಿಯಾದ ಪ್ರಮಾಣದಲ್ಲಿ ಛಾಸಿಗಳನ್ನು ಕೊಡದೇ ಬರೀ ಸಂಬಳ ಪಡೆದು ಈ ಫ್ಯಾಕ್ಟರಿಯಲ್ಲಿ ಕೋಟ್ಯಾಂತರ ರೂಪಾಯಿ ಲಾಸ್ ಆಗಿ ಇದನ್ನು ಮುಚ್ಚುವ ಸ್ಥಿತಿಗೆ ಬಂದಿದೆ. 15 ದಿವಸಗಳ ಹಿಂದೆ ಅಲ್ಲಿನ ಕಾರ್ಮಿಕರು ನಿಮ್ಮ ಮನೆ ಮುಂದು ನಾವು ಸತ್ಯಾಗ್ರಹ ಕೂಡುತ್ತೇವೆ ಎಂದು ಹೇಳಿದರು. ನೀವು ಏಕೆ ಕೂರುತ್ತೀರಿ, ನೀವು ನಮಗೆ ಒಂದೊಂದು ಓಟು ಕೊಟ್ಟಿದ್ದೀರಿ, ನಿಮ್ಮ ಕಷ್ಟವನ್ನು ಸರ್ಕಾರದ ಗಮನಕ್ಕೆ ತರುತ್ತೇವೆ. ಈ ಫ್ಯಾಕ್ಟರಿ ಲಾಸ್ ಆಗುವುದಕ್ಕೆ ನಾನು ಕಾರಣ ಅಲ್ಲ ಎಂದು ಹೇಳಿದೆ. ನಾಳೆ ನಾಡಿದ್ದು ಅವರು ನಮ್ಮ ಮನೆ ಮುಂದು ಕೂರುತ್ತಾರೆಂದು ಕಾಣುತ್ತದೆ.

ಅಧ್ಯಕ್ಷರು : ಸಂಬಳವನ್ನು ಕೊಟ್ಟಿದ್ದಾರಲ್ಲಾ?

ಶ್ರೀ ಕೆ.ಹೆಚ್. ಹನುಮೇಗೌಡ : ಅವರು ಸತ್ಯಾಗ್ರಹ ಕುಳಿತು ಗಲಾಟೆ ಮಾಡಿದರೆ ಸಂಬಳ ಕೊಡುತ್ತಾರೆ. ಹಾಗೆ ಗಲಾಟೆ ಮಾಡದೇ ಅವರು ಸಂಬಳ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಕಳೆದ 3-4 ವರ್ಷಗಳಿಂದ ಇದು ನಿರಂತರವಾಗಿ ನಡೆದಿದೆ. ಅಲ್ಲಿನ ಕಾರ್ಮಿಕರಿಗೆ ಸಾಕಷ್ಟು ಕೆಲಸ ಕೊಟ್ಟು ಉತ್ಪತ್ತಿ ಮಾಡಿದರೆ ಸಂಬಳ ಕೊಡುವುದಕ್ಕೂ ಸಾರ್ಥಕವಾಗುತ್ತದೆ ಗಲಾಟೆ ಮಾಡಿದರೆ ಸಂಬಳ ಕೊಟ್ಟು ಲಾಸ್ ತೋರಿಸುತ್ತಾರೆ. ಕೆಲಸ ಇಲ್ಲದೇ ಆ ಕಾರ್ಮಿಕರೂ ಅಲೆಯುವುದಕ್ಕೆ ಇಷ್ಟಪಡುವುದಿಲ್ಲ. 3-4 ತಿಂಗಳಿಂದ ಸುಮ್ಮನೆ ಸಂಬಳ ಕೊಟ್ಟು ಲಾಸ್ ಆಗುತ್ತಾ ಇದೆ. ಈ ಫ್ಯಾಕ್ಟರಿಯನ್ನು ಯಾವ ರೀತಿ ರೆವ್ಯೂ ಮಾಡುತ್ತೀರಿ ಎನ್ನುವ ಉದ್ದೇಶದಿಂದ ಗಮನ ಸೆಳೆವ ಸೂಚನೆ ತಂದಿದ್ದೇನೆ. ಇದನ್ನು ಮುಚ್ಚುವ ಪರಿಸ್ಥಿತಿ ಬಂದಿದೆ. ಇದನ್ನು ಲೇಬರ್ ಮಿನಿಸ್ಟರ್‌ಗೆ ಏಕೆ ರೆಫರ್ ಮಾಡಿದರೋ ಗೊತ್ತಿಲ್ಲ. ಇಲ್ಲಿ ಲೇಬರ್ ಡಿಸ್‌ಪ್ಯೂಟ್ ಇಲ್ಲ. ಕೆಲಸ ಕೊಟ್ಟರೆ ಕೆಲಸ ಮಾಡುತ್ತೇವೆ ಎಂದು ಕಾರ್ಮಿಕರು ಹೇಳುತ್ತಿದ್ದಾರೆ. ಈ ಸಂಸ್ಥೆ ಬಗ್ಗೆ ಸಾರಿಗೆ ಇಲಾಖೆ ಅಥವಾ ಕೈಗಾರಿಕಾ ಇಲಾಖೆಯಿಂದ ನನಗೆ ಈ ಸಂಸ್ಥೆಯ ಕಾಯಕಲ್ಪದ ಬಗ್ಗೆ ಉತ್ತರ ಬೇಕಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಇದಕ್ಕೆ ಸಹಿ ಹಾಕಿಲ್ಲ. ಸರಕಾರ ಇದರ ಬಗ್ಗೆ ತಪ್ಪು ಮಾಹಿತಿ ಕೊಟ್ಟಿದೆ. ಈ ಕಾರ್ಖಾನೆ ಮುಚ್ಚಿ ಹೋಗುವಂತಹ ಸ್ಥಿತಿಯಲ್ಲಿ ಇದೆ. ನನಗೆ ಎರಡು ನಿಮಿಷ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು : ಬಜೆಟ್ಟಿನ ಮೇಲೆ ಮಾತನಾಡುತ್ತೀರಲ್ಲ ಆಗ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಖಾಸಗಿಯವರಿಗೆ ಹರಾಜು ಹಾಕುತ್ತಿದ್ದಾರೆ. ಅದು ಇವರಿಗೆ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅದರ ಕತೆ ಈಗಾಗಲೇ ಮುಗಿದಿದೆ. ಸರ್ಕಾರ ಏನಾದರೂ ಅದಕ್ಕೆ ಉಸಿರು ಕೊಟ್ಟರೆ ಅದು ಉಳಿಯುತ್ತದೆ. ಇಲ್ಲವಾದರೆ ಕಾರ್ಮಿಕರು

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ನಿಯಾಮಾವಳಿಗಳನ್ನು ಬಿಟ್ಟು ಯಾವತ್ತೂ ಖಂಡಿತವಾಗಿ ಯಾವ ವಿಚಾರದಲ್ಲೂ ಪ್ರಸ್ತಾಪ ಮಾಡುವವನಲ್ಲ. ಇದನ್ನು ನೋಡಿದರೆ ನನ್ನ ಹೊಟ್ಟೆ ಕಿವುಚಿದ ಹಾಗಾಗುತ್ತದೆ. ತಾವು ಅವಕಾಶ ಕೊಟ್ಟರೆ ಹೇಳುತ್ತೇನೆ.

ಅಧ್ಯಕ್ಷರು : ವೇತನ ಪಾವತಿ ಮಾಡದೇ ಇರುವುದರಿಂದಾಗಿ ಉಂಟಾಗಿರುವ ತೊಂದರೆ ಬಗ್ಗೆ ಎಂದು ಇಲ್ಲಿ ಇದೆ. ಲಾರ್ಜರ್ ಕ್ವೆಶ್ಚನ್ ಇದಕ್ಕೆ ಸಂಬಂಧಪಡುವುದಿಲ್ಲ. ಅದು ಕೈಗಾರಿಕಾ ಮಂತ್ರಿಗಳಿಗೆ ಬರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರು ಕಾರ್ಮಿಕ ಮಂತ್ರಿಯಾದರೂ ಕೂಡ ಇಡೀ ಸರಕಾರದ ಪರವಾಗಿ ಉತ್ತರ ಕೊಡುತ್ತಾರೆ. ತಾವು ಅವಕಾಶ ಕೊಟ್ಟರೆ ಒಂದು ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀ ಎ.ಎಸ್. ನಾಡಗೌಡ : ಈಗಾಗಲೇ ಕಿಮ್ಕೋ ಪರಿಸ್ಥಿತಿ ಏನು ಆಗಿದೆ ಎಂಬ ಹೆಚ್ಚೂ ಕಮ್ಮಿ ಇಲ್ಲಿರುವಂತಹ ಎಲ್ಲಾ ಸದಸ್ಯರಿಗೂ ಗೊತ್ತಿದೆ. ಸರ್ಕಾರ ಇದನ್ನು ರಿವೈಸ್ ಮಾಡುವುದಕ್ಕೆ ಯೋಜನೆಯನ್ನು ಹಾಕಿಕೊಳ್ಳಬೇಕೆಂಬ ಪ್ರಸ್ತಾವನೆ ಸರ್ಕಾರದ ಮುಂದಿದೆ. 161 ಲಕ್ಷ ರೂಪಾಯಿಗಳನ್ನು ಕೇಳುತ್ತಿದ್ದಾರೆ. ಇದಕ್ಕೋಸ್ಕರ ಒಂದು ಜಾಯಿಂಟ್ ಮೀಟಿಂಗ್ ಮಾಡಬೇಕಾಂಥದ್ದು ಅವಶ್ಯಕತೆ ಇದೆ. ಆ ಜಾಯಿಂಟ್ ಮೀಟಿಂಗ್‌ನಲ್ಲಿ ಇದನ್ನು ತೆಗೆದುಕೊಂಡು ಯಾವ ರೀತಿ ಇದನ್ನು ರಿವೈಸ್ ಮಾಡಬಹುದು ಎಂಬ ಬಗ್ಗೆ ವಿಚಾರ ಮಾಡುತ್ತೇವೆ. ಅಲ್ಲಿ ಕೈಗಾರಿಕಾ ಮಂತ್ರಿಗಳು, ಕಾರ್ಯದರ್ಶಿಗಳು, ಕಾರ್ಮಿಕ ಕಾರ್ಯದರ್ಶಿಗಳು, ಕಮೀಷನ್‌ರವರು, ಎಲ್ಲರ ಜೊತೆಯಲ್ಲಿ ಕುಳಿತುಕೊಂಡು ಇದಕ್ಕೆ ಒಂದು ಸಲ್ಯೂಷನ್‌ನನ್ನು ಫೈಂಡ್ ಔಟ್ ಮಾಡುವುದಕ್ಕೋಸ್ಕರ ಪ್ರಯತ್ನ ಮಾಡುತ್ತೇವೆಂದು ಈ ಸಭೆಗೆ ಆಶ್ವಾಸನೆ ಕೊಡುತ್ತೇನೆ. ಕೆ.ಎಸ್.ಆರ್.ಟಿ.ಸಿ.ಯಿಂದ ಅವರಿಗೆ ಸರಿಯಾಗಿ ಅಂದರೆ ಕಳೆದ 3-4 ವರ್ಷಗಳಿಂದ ಬಾಡಿ ಬಿಲ್ಡರ್ಸ್‌ಗೆ ಆರ್ಡರ್ ಕೊಟ್ಟಿಲ್ಲ. ಈಗ ಒಮ್ಮಿದೊಮ್ಮೆಲೆ ಬಸ್ ಬಾಡಿ ಬಿಲ್ಡಿಂಗ್‌ಗೆ ಕೊಡುವುದರಿಂದ ಇದನ್ನು ರಿವೈವ್ ಮಾಡುವುದಕ್ಕೆ ಸಾಧ್ಯ ಇದೆ. This is an industry where it is totally depending on KSRTC. ಕೆ.ಎಸ್.ಆರ್.ಟಿ.ಸಿ.ಯವರು ಆರ್ಡರ್ ಪ್ಲೇಸ್ ಮಾಡದಿದ್ದರೆ ಅದನ್ನು ಮುಚ್ಚುವಂತಹ ಪರಿಸ್ಥಿತಿ ಅಲ್ಲ. ಮುಚ್ಚಿಯೇ ಹೋಗಿದೆ ಎಂದು ಹೇಳಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ : ಕೆ.ಎಸ್.ಆರ್.ಟಿ.ಸಿ.ಯವರು ಅವರಿಗೆ ಆರ್ಡರ್ ಕೊಡಲಿಲ್ಲ ಅಂದರೆ ಬೇರೆ ಖಾಸಗಿಯವರ ಹತ್ತಿರ ಬಾಡಿ ಬಿಲ್ಡರ್ಸ್‌ಗೆ ಕೊಟ್ಟು ಮಾಡಿಸಿದ್ದಾರೆ.

MR. SPEAKER: I must commend the Minister for being so honest about it.

+ ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೇ He is quite frank in this respect. ನಿಮ್ಮ ಜೊತೆಯಲ್ಲಿ ನಾನೂ ಕೂಡ ಉತ್ಸಾಹಿ ತರುಣ ಕಾರ್ಮಿಕ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಇದು ಬಹಳ ಸಿಂಪಲ್ ವ್ಯವಸಾಯೋತ್ಪನ್ನಕ್ಕೆ ಸಂಬಂಧಪಟ್ಟ ಉಪಕರಣಗಳನ್ನು ಮಾಡಬೇಕೆಂದು ರಾಜ್ಯ ಸರ್ಕಾರದವರು ಹಾಸನ, ಬೆಂಗಳೂರು ಯೂನಿಟ್‌ನಲ್ಲಿ ಈ ಕಿಮ್ಕೋ ಕಾರ್ಖಾನೆಯನ್ನು ಮಾಡಿದರು. ಇದನ್ನು ಮುಚ್ಚುವಂತಹ ಸ್ಥಿತಿಗೆ ನಾನು ಕಾರ್ಮಿಕ ಸಚಿವನಾಗಿದ್ದಾಗ ಬಂತು. ಆಗ ನಾನು ಏನು ಮಾಡಿದೆ ಎಂಬುದನ್ನು ತಾವು ಗಮನಿಸಬೇಕು. ಕೆ.ಎಸ್.ಆರ್.ಟಿ.ಸಿ.ಯಲ್ಲಿ ಪ್ರತಿ ವರ್ಷ 1000-1200 ಛಾಸಿಗಳನ್ನು ಕೊಳ್ಳುತ್ತಾರೆ. ಇದನ್ನು ಖಾಸಗಿಯವರಿಗೆ ಬಾಡಿ ಬಿಲ್ಡಿಂಗ್‌ಗೆ ಕೊಡುತ್ತಿದ್ದರು. ಅದು ರೆಕಾರ್ಡಿನಲ್ಲಿ ಕೂಡ ಇದೆ. ಖಾಸಗಿಯವರಿಗೆ ಕೊಡುವುದನ್ನು ನಾನು ಸಂಪೂರ್ಣವಾಗಿ ನಿಲ್ಲಿಸಿದೆ. ಆಂಧ್ರ ಪ್ರದೇಶದ ಆಲ್ವಿನ್ ಪಬ್ಲಿಕ್ ಅಂಡರ್ ಟೇಕಿಂಗ್‌ಗೆ

ಕೊಡುತ್ತಿದ್ದರು, ಅದು ಪಬ್ಲಿಕ್ ಅಂಡರ್ ಟೇಕಿಂಗ್ ಎಂದು ಅದೊಂದನ್ನು ಮಾತ್ರ ಕಂಟಿನ್ಯೂ ಮಾಡಿದೆ. ಕಿಮ್ಕೋ ಅವರಿಗೆ ವರ್ಷಕ್ಕೆ 200 ಛಾಸಿಗಳಷ್ಟೇ ಬೇಕಾಗಿರುವುದು. ಕೆ.ಎಸ್.ಆರ್.ಟಿ.ಸಿ. 1200 ಛಾಸಿಗಳನ್ನು ಕೊಂಡುಕೊಳ್ಳುತ್ತಿರುವಲ್ಲಿ 200 ಅಷ್ಟೇ ಕಿಮ್ಕೋರವರಿಗೆ ಬೇಕಾಗಿರುವುದು ಹಾಗೂ ಹಾಸನದವರಿಗೂ ಅಷ್ಟೇ. 6 ತಿಂಗಳ ನಂತರ ಅದರ ಪರ್‌ಫಾರ್ಮೆನ್ಸ್ ರಿಸೆಲ್ಟ್‌ನ್ನು ತರಿಸಿದ್ದೆ. ಆಲ್ ಇಂಡಿಯಾ ಸ್ಟೇಟ್ ಟ್ರಾನ್ಸ್‌ಪೋರ್ಟ್ ಅಂಡರ್‌ಟೇಕಿಂಗ್ ಕೇಂದ್ರ ಸರ್ಕಾರದವರೇ ಕಿಮ್ಕೋ ಕಾರ್ಮಿಕರು ಬಿಲ್ಡ್ ಮಾಡಿರತಕ್ಕಂತಹ ಬಾಡಿ ಇಂಡಿಯಾ ದೇಶದಲ್ಲೇ ಬೆಸ್ಟ್ ಎಂದು ಸರ್ಟಿಫಿಕೇಟನ್ನು ಕೊಟ್ಟಿದ್ದಾರೆ.

ಕಿಂಕೋದವರು ನನ್ನ ಮೇಲೆ ಒತ್ತಡ ತಂದರು. ಕೆ.ಎಸ್.ಆರ್.ಟಿ.ಸಿ.ಯೊಳಗೆ ಮರ್ಜ್ ಮಾಡಿ ಎಂದು ಹೇಳಿದರು. ಆಗ ನಾನು ಹೇಳಿದೆ, ಇದು ಸಾಧ್ಯವಿಲ್ಲ. ಕೆ.ಎಸ್.ಆರ್.ಟಿ.ಸಿ.ಯಲ್ಲಿ 50-40 ಸಾವಿರ ಕಾರ್ಮಿಕರು ಇದ್ದಾರೆ. ಅದನ್ನೇ ಡಿವೈಡ್ ಮಾಡಬೇಕೆಂದು ಇದ್ದೇನೆ. ಆ ಕೆಲಸ ಮಾಡಲಿಕ್ಕೆ ನಾನು ಹೊರಟಿದ್ದೇನೆ. ನಿಮ್ಮನ್ನು ಏತಕ್ಕೆ ಸೇರಿಸಬೇಕು? ನೀವು ಒಂದು ಸಬ್ಸಿಡರಿ ಆನ್ಸಿಲರಿ ಯೂನಿಟ್ ಮಾಡಿ ನಿಮಗೆ ಎಷ್ಟು ಬೇಕೋ ಅಷ್ಟು ಕೊಡೋಣವೆಂದು ಹೇಳಿದ್ದೇನೆ. ಕೆ.ಎಸ್.ಆರ್.ಟಿ.ಸಿ. ಮ್ಯಾನೇಜ್‌ಮೆಂಟ್‌ಗೂ ಮತ್ತು ಕಿಂಕೋ ಮ್ಯಾನೇಜ್‌ಮೆಂಟ್‌ಗೂ ಒಂದು ಅಗ್ರಿಮೆಂಟ್ ಮಾಡಿಸಿದ್ದೇನೆ. ಹಾಸನದಲ್ಲಿರುವ ಕೆಲಸಗಾರರು ಒಳ್ಳೆಯ ಕೆಲಸಗಾರರಿದ್ದಾರೆ. ಬೆಸ್ಟ್ ವರ್ಕರ್ಸ್ ಇದ್ದಾರೆ. ಇದು ಆದಮೇಲೆ ಕೆ.ಎಸ್.ಆರ್.ಟಿ.ಸಿ.ಯಿಂದ ಒಬ್ಬ ರೀಜನಲ್ ಮ್ಯಾನೇಜರ್‌ರವರನ್ನು ಕಿಂಕೋಗೆ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಪೋಸ್ಟ್ ಮಾಡಿದ್ದೇವೆ. ಅಲ್ಲಿ ಅಡ್ಮಿನಿಸ್ಟ್ರೇಟಿವ್ ವರ್ಕ್ಸ್ ನೋಡಿಕೊಳ್ಳುವುದಕ್ಕೋಸ್ಕರ ಆ ರೀತಿ ಮಾಡಿದ್ದೇವೆ. ದುರ್ದೈವ ಈಗ ಏನಾಗಿದೆ ಅಂದರೆ ರಾಷ್ಟ್ರಪತಿ ಆಡಳಿತ ಇದ್ದಂತಹ ಕಾಲದಲ್ಲಿ ಆಗಿದ್ದಂತಹ ಒಪ್ಪಂದವನ್ನು ರದ್ದುಮಾಡಿ ಕಂಪ್ಲೀಟ್ ಪ್ರೈವೇಟ್‌ನವರಿಗೆ ಬಾಡಿ ಬಿಲ್ಡಿಂಗ್ ಕೆಲಸವನ್ನು ಕೊಡುತ್ತಿದ್ದಾರೆ. ಕೆ.ಎಸ್.ಆರ್.ಟಿ.ಸಿ.ಯ 4 ಸಾವಿರ ಕಾರ್ಮಿಕರು ಇವತ್ತು ಬೀದಿಯಲ್ಲಿ ಮೆರವಣಿಗೆ ಹೊರಟಿದ್ದಾರೆ. ತಮ್ಮನ್ನು ಸಹ ಭೇಟಿ ಮಾಡಬೇಕೆಂದು ಕಾರ್ಮಿಕ ನಾಯಕರಾದ ಎಂ.ಎಸ್. ಕೃಷ್ಣನ್‌ರವರು ಹೇಳುತ್ತಿದ್ದರು. ಅವರು ತಮ್ಮನ್ನು ಭೇಟಿ ಮಾಡುವವರು ಇದ್ದಾರೆ. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ, ಕಿಂಕೋದವರಿಗೆ ಬಾಡಿ ಬಿಲ್ಡಿಂಗ್‌ಗೆ ಕೊಡುತ್ತಿದ್ದ ಆರ್ಡರಿನ ಒಪ್ಪಂದ ಏನಿತ್ತು ಅದು ರಾಷ್ಟ್ರಪತಿಯವರ ಆಡಳಿತದಲ್ಲಿ ನಿಂತಿದೆ. ಆಮೇಲೆ ಅವರಿಗೆ ಆರ್ಡರ್ಸ್ ಕೊಡಲಿಲ್ಲ, ಇವತ್ತು ಮಾನ್ಯ ಅಜೀಜ್‌ಸೇಠ್‌ರವರು ಸಾರಿಗೆ ಮಂತ್ರಿಗಳಾದಮೇಲೆ ಕಂಪ್ಲೀಟ್ ಪ್ರೈವೇಟ್‌ನವರಿಗೆ ಬಾಡಿ ಬಿಲ್ಡ್‌ಗೆ ಕೊಡುತ್ತಿದ್ದಾರೆ. ಫರ್‌ಫಾರ್ಮೆನ್ಸ್ ಬಹಳ ಚೆನ್ನಾಗಿತ್ತೆಂದು ಕೆ.ಎಸ್.ಆರ್.ಟಿ.ಸಿ.ಯವರು ಸರ್ಟಿಫೈ ಮಾಡಿದ್ದಾರೆ. ಹಾಸನ ಮತ್ತು ಬೆಂಗಳೂರಿನಲ್ಲಿ ಸುಮಾರು 300 ಜನ ಕಾರ್ಮಿಕರು ಇದ್ದಾರೆ. ಏತಕ್ಕೆ ಸ್ವಾಮಿ ಅವರಿಗೆ ಕೆಲಸ ಕೊಡಬಾರದು? ಲೇಬರ್ ಕಮೀಷನರ್ ಬೇಕಾಗಿಲ್ಲ, ಲಾ ಸೆಕ್ರೆಟರಿಯವರು ಬೇಕಾಗಿಲ್ಲ, ಯಾರೂ ಬೇಕಾಗಿಲ್ಲ. ಎರಡೂ ಸ್ಟೇಟ್ ಗೌರ್ನ್‌ಮೆಂಟ್ ಪಬ್ಲಿಕ್ ಅಂಡರ್ ಟೇಕಿಂಗ್ಸ್ ತಾವು ಒಂದು ಸೂಚನೆಯನ್ನು ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳಿಗೆ ಕೊಟ್ಟು ಹಳೆಯ ಒಪ್ಪಂದವನ್ನು ಮುಂದುವರಿಸಿಕೊಂಡು ಹೋಗುವಂತೆ ಹೇಳಿ. ಸಾರಿಗೆ ಮಂತ್ರಿಗಳವರ ಜೊತೆಯಲ್ಲಿ ಮಾತನಾಡಿ. 1985-86, 1986-87, 1987-88ರಲ್ಲಿ ಇದ್ದ ಒಪ್ಪಂದದ ಪ್ರಕಾರ 200 ಬಸ್‌ಗಳ ಬಾಡಿ ಬಿಲ್ಡ್ ಮಾಡಲಿಕ್ಕೆ ಕೊಡಿ, ಕೊಡುವುದಕ್ಕೆ ಏನು ತೊಂದರೆ? ತಾವು ನಿಯಮಾವಳಿ ಪ್ರಕಾರ ಕೆ.ಎಸ್.ಆರ್.ಟಿ.ಸಿ.ಯವರು ಬಾಡಿ ಬಿಲ್ಡ್‌ಗೆ ಕೊಟ್ಟರೆ ಮಾತ್ರ ಕೆಲಸ ಇರುತ್ತದೆ. ಇಲ್ಲದಿದ್ದರೆ ಅಲ್ಲಿ ಕೆಲಸ ಇರುವುದಿಲ್ಲ, ಅದು ಅಲ್ಲದೆ ಕಾರ್ಖಾನೆಯ ಕೆಲಸಗಾರರಿಗೆ ಕಾರ್ಖಾನೆಯಲ್ಲಿ ಕೆಲಸ ಸಿಗದೆ ಅಶಾಂತಿ ಮೂಡುತ್ತಿದೆ. ಅದಕ್ಕೆ ಕಾರಣ ಸರ್ಕಾರವೆ. ಕಾರ್ಮಿಕರಲ್ಲ, ಬೇರೆ ಯಾರೂ ಅಲ್ಲ. ಹಿಂದೆ ಇದ್ದ ಸರ್ಕಾರದವರು ಏನು ಮಾಡುತ್ತಿದ್ದರು? ಕಾರ್ಖಾನೆ ಹಾಳಾದರೂ

ಪರವಾಗಿಲ್ಲ, ಸರ್ಕಾರದ ಕಾರ್ಖಾನೆಗಳು ಏನಾದರೂ ಆಗಲಿ, ಅವುಗಳನ್ನು ಕತ್ತುಹಿಸುಕಿ ಜೀವಸಹಿತ ಸಮಾಧಿ ಮಾಡಬೇಕೆನ್ನುವ ಧೋರಣೆಯನ್ನು ಸರ್ಕಾರ ಅನುಸರಿಸುತ್ತಿದೆ ಎನ್ನುವುದಕ್ಕೆ ಇದೊಂದು ಜ್ವಲಂತ ಉದಾಹರಣೆ. ಉಳಿದಿರತಕ್ಕ ಕಾರ್ಖಾನೆಗಳಿಗೆ ನಾನು ಹೋಗುವುದಿಲ್ಲ. ಮೈಸೂರು ಡಿಜರ್ಜೆಂಟ್, ಕ.ವಿ.ಕಾ., ಮೈಸೂರು ಪೇಪರ್ ಮಿಲ್ಸ್ ಇನ್ನು ಬೇರೆ ಬೇರೆ ಕಾರ್ಖಾನೆಗಳು ಇವೆ ಅವುಗಳಿಗೆ ನಾನು ಹೋಗುವುದಿಲ್ಲ. ಇದು ಸಣ್ಣ ಕಾರ್ಖಾನೆಯಾದರೂ ಇದಕ್ಕಿಂತ ಜ್ವಲಂತ ಉದಾಹರಣೆ. ಇದಕ್ಕಿಂತ ಮತ್ತೊಂದು ಯಾವುದು ಇಲ್ಲ. ಕಾರ್ಮಿಕ ಆಸ್ತಿಯನ್ನು ಸರಿಯಾಗಿ ನಿರ್ವಹಣೆ ಮಾಡದೆ, ಕೊಡಬೇಕಾಗಿರುವ ಆರ್ಡರ್ಸ್‌ನ್ನು ಅವರಿಗೆ ಕೊಡದೆ, ಇವರು ಮಾಡಿರುವುದನ್ನು ನೋಡಿದರೆ ಇದರಲ್ಲಿ ಭ್ರಷ್ಟಾಚಾರ ಅಡಗಿದೆ ಎನ್ನತಕ್ಕದ್ದು ನನಗೆ ಬಂದಿರತಕ್ಕ ಸಂಶಯ.

ಶ್ರೀ ಸಿ. ಬೈರೇಗೌಡ : ಸಭಾಧ್ಯಕ್ಷರೇ ಈ ಸದನದ ಒಂದು ಸಮಿತಿಯನ್ನು ಮಾಡಿ ವಿಚಾರಣೆ ನಡೆಸತಕ್ಕದ್ದು ಬಹಳ ಅವಶ್ಯಕತೆ ಇದೆ. ಏಕೆಂದರೆ ಇಡೀ ನೀತಿಗೆ ತಿಲಾಂಜಲಿಯನ್ನು ಒಂದಾದಮೇಲೊಂದರಂತೆ ಕೊಡತಕ್ಕಂಥ ಪ್ರಯತ್ನ ಸರ್ಕಾರದಿಂದ ಇವತ್ತಿನ ದಿವಸ ನಡೆಯುತ್ತಿದೆ. ಆದ್ದರಿಂದ ಸದನದ ಸಮಿತಿಯನ್ನು ಮಾಡಿ ಅಮೂಲಾಗ್ರವಾದ ವಿಚಾರಣೆ ಆಗಲೇಬೇಕಾಗಿದೆ. ಏತಕ್ಕೆ ಕೆ.ಎಸ್.ಆರ್.ಟಿ.ಸಿ.ಯವರು ಈ ಸಂಸ್ಥೆಗೆ ಆರ್ಡರ್ ಕೊಡುತ್ತಿಲ್ಲ? ಇದರ ಹಿನ್ನೆಲೆ ಏನು? ಯಾರ ಕೈವಾಡ ಇದೆ? ಎಂಬುದು ಹೊರಗಡೆಗೆ ಬರತಕ್ಕಂಥಾದ್ದು ರಾಜ್ಯದ ಜನತೆಯ ದೃಷ್ಟಿಯಿಂದ ಅವಶ್ಯಕತೆ ಇದೆ. ಸರ್ಕಾರ ದಯವಿಟ್ಟು ಇದಕ್ಕೆ ಒಪ್ಪಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎ.ಎಸ್. ನಾಡಗೌಡ : ಸನ್ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರಾದ ಮಾನ್ಯ ಬೈರೇಗೌಡರು ಹೇಳಿದಂಥ ಮಾತು ಸತ್ಯಕ್ಕೆ ದೂರವಾದದ್ದು. ಅವರಿಗೆ ಎಷ್ಟು ಕಳಕಳಿ ಇದೆಯೋ, ನಮಗೂ ಕೂಡ ಅಷ್ಟೇ ಕಳಕಳಿ ಆ ಜನರ ಬಗ್ಗೆ ಕಾರ್ಮಿಕರ ಬಗ್ಗೆ ಇದೆ. ಸರ್ಕಾರದ ಮೇಲೆ ಒತ್ತಡ ತರುವಂಥ ಪ್ರಯತ್ನ ಮಾಡಿ ಯಾವುದೇ ಪರಿಸ್ಥಿತಿಯಲ್ಲಿ ಇದನ್ನು ನಾವು ಕೈಗೊಂಡು ಮತ್ತೆ ಅದಕ್ಕೆ ಪುನರ್‌ಚೇತನ ಕೊಡುವಂಥ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ ಎಂದು ಸ್ಪಷ್ಟಪಡಿಸುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ಹಿಂದೆ ಹಾಸನದ ಇಂಪ್ಲಿಮೆಂಟ್ ಫ್ಯಾಕ್ಟರಿ ವರ್ಕರ್ಸ್ ಆಫ್ರಿಕಾದ ನೈಜೀರಿಯಾ ಮೊದಲಾದ ಹೊರದೇಶಗಳಿಗೆಲ್ಲ ಹೋಗಿ ಫ್ಯಾಕ್ಟರಿ ಇನ್‌ಸ್ಟಾಲ್ ಮಾಡಿಬಂದಂಥ ಉದಾಹರಣೆಗಳು ಇವೆ. ಹಿಂದೆ ತಾವು ಇಂಡಸ್ಟ್ರಿ ಮಿನಿಸ್ಟರ್ ಆಗಿದ್ದಾಗ ಎಂದು ಕಾಣುತ್ತದೆ. ನೈಜೀರಿಯಾ ಮತ್ತು ಇನ್ನೊಂದು ದೇಶದಲ್ಲಿ ಫ್ಯಾಕ್ಟರಿಯನ್ನು ಇನ್‌ಸ್ಟಾಲ್ ಮಾಡಿಬಂದ, ಇಂತಹ ಉತ್ತಮವಾದ ಕುಶಲಕರ್ಮಿಗಳು ಇರತಕ್ಕಂಥ ಫ್ಯಾಕ್ಟರಿಯನ್ನು ....

ಅಧ್ಯಕ್ಷರು : ಅವರೆಲ್ಲ ಈಗ ರಿಟೈರ್ ಆಗಿ ಹೋಗಿರಬೇಕು ಗೌಡರೇ.

ಶ್ರೀ ಕೆ.ಹೆಚ್. ಹನುಮೇಗೌಡ : ಅಂತಹ ಫ್ಯಾಕ್ಟರಿಯನ್ನು ಈ ಸ್ಥಿತಿಗೆ ತಂದು ಈಗ ಅವರು ಬೀದಿಪಾಲಾಗುವುದು ಎಂದರೆ ಅರ್ಥ ಇಲ್ಲ. ನಾನು ಹೋದವರ್ಷ ಇದನ್ನು ಪ್ರಸ್ತಾಪ ಮಾಡಿದ್ದಾಗ ತಕ್ಷಣ ಇದನ್ನು ರಿವೈವ್ ಮಾಡಿ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದ್ದರು.

ಅಧ್ಯಕ್ಷರು : ಇವರು ರಿವೈವ್ ಮಾಡದೇ ಹೋದರೆ ಡಿಮಾಂಡ್ಸ್ ಡಿಬೇಟ್ ಬರುತ್ತದೆ. ಆಗ ಇದನ್ನು ತೆಗೆದುಕೊಳ್ಳೋಣ.

ಶ್ರೀ ಕೆ.ಹೆಚ್. ಹನುಮೇಗೌಡ : ಇಲ್ಲ, ನಾವು ಎಷ್ಟೋ ಪಾಯಿಂಟ್ಸ್ ಹೇಳುತ್ತೇವೆ. ಆಗ ಇದು ನೆನಪಲ್ಲಿ ಇರುವುದಿಲ್ಲ.

ಅಧ್ಯಕ್ಷರು : ಇಲ್ಲ, ನಾನು ಜ್ಞಾಪಕ ಇಟ್ಟುಕೊಂಡು ಹೇಳುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ಈಗ ಅವರು ಎಂಟು ಚಾಸಿಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದರು. ಅದನ್ನು ಎಂಟು ದಿವಸಗಳಲ್ಲೇ ಮಾಡಿ ಬಿಸಾಕುತ್ತಾರೆ. ಆಮೇಲೆ ಏನು ಮಾಡಬೇಕು? ಅವರು ಪ್ರೈವೇಟ್‌ನವರಿಗೆ 60-70 ಚಾಸಿಗಳನ್ನು ಕಟ್ಟುವುದಕ್ಕೆ ಕೊಡುವುದರ ಬದಲು ಸರ್ಕಾರದ ಫ್ಯಾಕ್ಟರಿಗೇ ಏಕೆ ಕೊಡಬಾರದು? ಎರಡನೇಯದು, ಅಲ್ಲಿರತಕ್ಕಂಥ ಎಂ.ಡಿ. ಯಾರಿದ್ದಾರೆ? ಅವರ ಮೇಲೆ ಕಾರ್ಮಿಕರು ಬಹಳ ಕಂಪ್ಲೇಂಟ್ ಹೇಳುತ್ತಾರೆ. ಅವರೇ ಇಷ್ಟೆಲ್ಲ ಅನಾಹುತಗಳಿಗೆ ಕಾರಣರು ಎಂದು ಅವರು ಹೇಳುತ್ತಾರೆ. ಆ ಕಾರ್ಮಿಕರ ಬಗ್ಗೆ ಸಹಾನುಭೂತಿ ಇಟ್ಟುಕೊಂಡು, ದೇಶದ ಹಿತದೃಷ್ಟಿಯಿಂದ ಸ್ವಲ್ಪ ಉತ್ತಮವಾಗಿ ಕೆಲಸ ಮಾಡುವ ಅಧಿಕಾರಿಗಳನ್ನು ಹುಡುಕಿ ಹಾಕುವುದಕ್ಕೆ ಆಗುವುದಿಲ್ಲವೇ?

ಅಧ್ಯಕ್ಷರು : ಹುಡುಕುತ್ತಾರೆ ಬಿಡಿ.

ಶ್ರೀ ಕೆ.ಎಚ್. ಹನುಮೇಗೌಡ : ಒಂದು ವರ್ಷದಿಂದ ಹೀಗೆಯೇ ಆಗಿ ಬಹಳ ತೊಂದರೆಯಾಗುತ್ತಿದೆ. ಆಗ ಅವರು ಹೇಳಬೇಕು. ಇನ್ನು ಎಷ್ಟು ದಿವಸಗಳ ಒಳಗಾಗಿ, ಈಗ ಒಂದು ಮಾತನ್ನು ಹೇಳಿದರು, ಇಂಡಸ್ಟ್ರಿ ಡಿಪಾರ್ಟ್‌ಮೆಂಟ್, ಕೆ.ಎಸ್.ಆರ್.ಟಿ.ಸಿ.ಯವರು ಮತ್ತು ಲೇಬರ್-ಮೂರು ಜನ ಸೇರಿಕೊಂಡು ಇದನ್ನು ಸೆಟಲ್ ಮಾಡುತ್ತೇವೆ ಎಂದು. ಇದರಲ್ಲಿ ಫೈನಾನ್ಸ್‌ನ್ನೂ ದಯವಿಟ್ಟು ಸೇರಿಸಿಕೊಳ್ಳಿ. ಇನ್ನೆಷ್ಟು ದಿವಸಗಳಲ್ಲಿ ಮಾಡುತ್ತೀರಿ ಎಂದು ದಯವಿಟ್ಟು ಹೇಳಬೇಕು. ನೀವು ಹೇಳಿದಮೇಲೆ ಅದರಂತೆ ನಡೆದುಕೊಳ್ಳದೇ ಹೋದರೆ ಆ ಕಾರ್ಮಿಕರನ್ನು ನಾನು ತಮ್ಮ ಮನೆ ಹತ್ತಿರಕ್ಕೆ ಕಳಿಸುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಹನುಮೇಗೌಡರೇ, ಸರ್ಕಾರ ಎಂತಹ ಅಧಿಕಾರಿಗಳನ್ನು ಹುಡುಕುತ್ತಾರೆ ಎಂಬುದು ನಿಮಗೆ ಗೊತ್ತಿಲ್ಲವೇನು?

ಶ್ರೀ ಎ.ಎಸ್. ನಾಡಗೌಡ : ಈ ಮೀಟಿಂಗ್‌ನ್ನು 14ನೇ ತಾರೀಖಿಗೆಂದು ಫಿಕ್ಸ್‌ಮಾಡಿದ್ದೆವು. ಆದರೆ ಮುಖ್ಯಮಂತ್ರಿಗಳು ತಮಗೆ ಬಿಡುವಿಲ್ಲವೆಂದು ಹೇಳಿ ಅಧಿವೇಶನ ನಂತರ ಇಟ್ಟುಕೊಳ್ಳಿ ಎಂದು ಹೇಳಿದ್ದಾರೆ. ಖಂಡಿತವಾಗಿ ಅಧಿವೇಶನದ ನಂತರ, ಈ ರೀತಿ ಒಂದೇ ಅಲ್ಲ, ಬಹಳ ಸಂಸ್ಥೆಗಳು ಇವೆ, we have to evolve some policy on that also sir.

ನಾನು ಅದನ್ನು ಖಂಡಿತವಾಗಿಯೂ ಮಾಡುತ್ತೇವೆ.

2) ಸಾಗರದ ಅಡಿಕೆ ಸಂಸ್ಕರಣಾ ಹಾಗೂ ಮಾರಾಟ ಕೇಂದ್ರದಲ್ಲಿ 60 ಲಕ್ಷ ರೂಪಾಯಿ ಬೆಲೆಬಾಳುವ ಅಡಿಕೆ ನಾಪತ್ತೆಯಾಗಿರುವುದು.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಸಾಗರದ ಅಡಿಕೆ ಸಂಸ್ಕರಣಾ ಹಾಗೂ ಮಾರಾಟ ಕೇಂದ್ರದಲ್ಲಿ 60 ಲಕ್ಷ ರೂಪಾಯಿ ಬೆಲೆಬಾಳುವ ಅಡಿಕೆ ನಾಪತ್ತೆಯಾಗಿರುವ ಬಗ್ಗೆ ಮಾನ್ಯ ಸಹಕಾರ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಎಚ್. ಪಾಟೀಲ್ (ಸಹಕಾರ ಮಂತ್ರಿಯವರು) : ಮಾನ್ಯ ಅಧ್ಯಕ್ಷರೇ, ನನ್ನ ಹೇಳಿಕೆಯು ಈ ರೀತಿ ಇದೆ :-

ಸಾಗರ ಅಡಿಕೆ ಪರಿಷ್ಕರಣ ಮತ್ತು ಮಾರಾಟ ಸಂಘದಲ್ಲಿ 2000 ಅಡಿಕೆ ಮೂಟೆಗಳು ಕಾಣೆಯಾಗಿದ್ದು, ಆ ದಾಸ್ತಾನಿನ ಒಟ್ಟು ಮೌಲ್ಯವು ಆಡಿಟ್ ವರದಿಯ ಪ್ರಕಾರ ರೂ. 68,57,245-13 ಪೈಸೆ ಆಗಿರುತ್ತದೆ. ಈ ದಾಸ್ತಾನು ದುರುಪಯೋಗದ ಬಗ್ಗೆ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ. ಈ ಸಂಘದಲ್ಲಿ ದಿನಾಂಕ: 31-12-1989ಕ್ಕೆ ಸಂಘದ ಸದಸ್ಯರಿಗೆ ನೀಡಲಾದ ಸಾಲದ ಒಟ್ಟು ಮೊತ್ತವು